## ಕನ್ನಡಿಗರ ಬಸ್ ನಿಲ್ದಾಣ

ತಂಗುದಾಣ, ಕಟ್ಟಡ, ವೃತ್ತಗಳಿಗೆ ಗಣ್ಯರ ಅಥವಾ ಹುತಾತ್ಮರ ಹೆಸರನ್ನು ನಾಮಕರಣ ಮಾಡಬೇಕು ಎಂದಾಗ ವಿವಾದಗಳೇ ಹೆಚ್ಚು. ಆದರೆ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಹಳ್ಳಿಗುಡಿ ಗ್ರಾಮದಲ್ಲಿ ಬಸ್ ನಿಲ್ದಾಣಕ್ಕೆ ಕನ್ನಡಿಗರ ಬಸ್ ನಿಲ್ದಾಣ ಎಂದು ನಾಮಕರಣ ಮಾಡಿ ಫಲಕ ಬರೆಸಿರುವುದು ಗಮನಸೆಳೆಯುತ್ತದೆ. ಈ ಹೆಸರಿಗೆ ಯಾರಿಂದಲೂ ಅಪಸ್ವರ ಬರಲಿಲ್ಲ ಎಂಬ ಹಳ್ಳಿಗರ ಮಾತು ಖುಷಿಕೊಟ್ಟಿತು.

ಹೊಸ ವರ್ಷ, ಹುಟ್ಟುಹಬ್ಬ, ಸಭೆ–ಸಮಾರಂಭಗಳಿಗೆ ರಸ್ತೆಗೆ ಬಣ್ಣ ಬಳಿದು ಕೇಕ್ ಕತ್ತರಿಸುವ ಇಂದಿನ ದಿನಗಳಲ್ಲಿ ಗ್ರಾಮದ ಹಲವು ಯುವಕರು ಸೇರಿ ಬಸ್ ನಿಲ್ದಾಣಕ್ಕೆ ಕನ್ನಡಿಗರ ಬಸ್ ನಿಲ್ದಾಣ ಎಂದು ಹೆಸರು ಇರಿಸಿದ್ದಾರೆ. ಇದರ ಅಡಿಯೇ 'ನಮ್ಮ ಊರು, ನಮ್ಮ ಹೆಮ್ಮೆ' ಎಂದು ಬರೆಸಿರುವುದು ಹೆಮ್ಮೆಯ ವಿಚಾರವಾಗಿದೆ. ಇಷ್ಟಕ್ಕೆ ಮುಗಿದಿಲ್ಲ, 2014ರಲ್ಲಿ ಹುತಾತ್ಮರಾದ ಮಲ್ಲಪ್ಪ ಚನ್ನಳ್ಳಿ ಸಹ ಇದೇ ಗ್ರಾಮದವರಾಗಿದ್ದು, ಇದರ ಸ್ಮರಣಾರ್ಥ ಅವರ ಭಾವಚಿತ್ರವನ್ನೂ ಇಲ್ಲಿ ಹಾಕಿದ್ದಾರೆ. ಹಳ್ಳಿಗುಡಿ ಯುವಕರಲ್ಲಿ, ಗ್ರಾಮಸ್ಥರಲ್ಲಿ ಇಂತಹ ಭಾಷಾಭಿಮಾನ, ದೇಶಾಭಿಮಾನ ಇರುವುದು ಮೆಚ್ಚುವ ವಿಷಯ.

–ಸಿ.ಕೆ. ಗಣಪ್ಪನವರ ಮುಂಡರಗಿ






## ನಟ್ಟು-ಬೋಲ್ಟಿಲ್ಲದ ಮಂಚ

ಚಿತ್ರದಲ್ಲಿ ಕಾಣುತ್ತಿರುವುದು ಹಳೆಯ ಕಾಲದ ಮಂಚ. ಕಬ್ಬಿಣ ಮತ್ತು ಕಟ್ಟಿಗೆಯಿಂದ ತಯಾರಿಸಿದ ಈ ಮಂಚ ತಯಾರಿಸಲು ನಟ್ಟು–ಬೋಲ್ಟು ಆಗಲಿ, ಮೊಳೆಯಾಗಲಿ ಎಲ್ಲಿಯೂ ಉಪಯೋಗಿಸಿಲ್ಲ. ಕಬ್ಬಿಣದ ಎರಡು ಕಾಲುಗಳ ಮೇಲೆ ಅಡ್ಡಕ್ಕೆ ಹಲಗೆಯನ್ನು ಇಟ್ಟು ಮಾಡಲಾಗಿದೆ. ಇದನ್ನು ಕೇವಲ ಸೆಕೆಂಡುಗಳಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬಹುದು. ಹಲಗೆ ಮತ್ತು ಕಾಲುಗಳನ್ನು ಎಲ್ಲಿಯೂ ಫಿಕ್ಸ್ ಮಾಡದೆ ಇರುವುದರಿಂದ ಒಬ್ಬರೇ ಇದನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕಾಲು ಮತ್ತು ಹಲಗೆಗಳನ್ನು ಬಿಡಿಬಿಡಿಯಾಗಿ ಸಾಗಿಸಿ, ಎಲ್ಲಿ ಬೇಕೋ ಅಲ್ಲಿ ಜೋಡಿಸಬಹುದು.

–ವೆಂಕಟೇಶ ಬೈಲೂರು, ಕುಮಟಾ

## ಜಾಮೂನು ಅಣಬೆ

ಮಳೆಗಾಲ ಕಾಲಿಡುತ್ತಿದ್ದಂತೆ ಹಿತ್ತಲಿನಲ್ಲಿ ವೈವಿಧ್ಯಮಯ ಅಣಬೆಗಳು ಹುಟ್ಟಿಕೊಳ್ಳುವುದು ಸ್ವಾಭಾವಿಕ. ಚಿತ್ರದಲ್ಲಿ ಕಾಣಿಸಿಕೊಂಡಿರುವ ಜಾಮೂನು ಅಣಬೆಯು ಈಚೆಗೆ ನಮ್ಮ ಮನೆಯ ಹಿತ್ತಲಿನಲ್ಲಿ ಕಾಣಿಸಿಕೊಂಡಿತು. ಹುಟ್ಟುವಾಗ ಹಾಲಿನಂತೆ ಬೆಳ್ಳಗಿದ್ದ ಈ ಅಣಬೆ ಮರುದಿನ ನೋಡಿದರೆ ಸಕ್ಕರೆ ಪಾಕ ಮೆತ್ತಿಕೊಂಡು ಥಳಥಳ ಹೊಳೆಯುವ ಜಾಮೂನಿನಂತೆ ಆಗಿತ್ತು. ನಾಲಿಗೆಯಲ್ಲಿರಿಸಿದರೆ ಕರಗುವ ಜಾಮೂನಿನಂತೆ ಸುರಿಯುವ ಮಳೆಗೆ ಕರಗಿ ಹೋಗುವ ಈ ಸುಂದರ ಅಣಬೆ ಅಪರೂಪವಾಗಿ ಮಲೆನಾಡಿನಲ್ಲಿ ಕಣ್ಣಿಗೆ ಬೀಳುತ್ತದೆ. ಹಾಗೆಯೇ ಮಾಯವಾಗುತ್ತದೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

